ಪೌರಾಯುಕ್ತರು / ಮುಖ್ಯಾಧಿಕಾರಿಗಳಿಗೆ ತಿಳಿಸಲಾಗಿದೆ. ಕೊಳಚೆ ಪ್ರದೇಶದ ನಿವಾಸಿಗಳಿಗೆ ಸಂಬಂಧಿಸಿದಂತೆ ಜವಾಹರಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಯೋಜನೆ ಹಾಗೂ ಸಮಗ್ರ ವಸತಿ ಮತ್ತು ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆ ಅಲ್ಲದೇ ಜವಾಹರಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಯೋಜನೆ ಹಾಗೂ ನಗರ ಬಡಜನರಿಗೆ ಮೂಲ ಸೌಕರ್ಯ ಯೋಜನೆಗಳಡಿ ಆಶ್ರಯ ಒದಗಿಸಲಾಗುವುದು.

ಕೃಷ್ಣದೇವರಾಯರ 500 ವರ್ಷದ ಸಂಭ್ರಮಾಚರಣೆಯಲ್ಲಿ ಇಲಾಖೆಗಳು ಖರ್ಚು ಮಾಡಿದ ಹಣ

238 (452) ಶ್ರೀ ಶ್ರೀನಿವಾಸ್ (ವಾಸು) ಎಸ್.ಆರ್ (ಗುಬ್ಬಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣದೇವರಾಯರವರ 500ನೇ ವರ್ಷದ ಆಳ್ವಿಕೆಯ ಸಂಭ್ರಮಾಚರಣೆಯ ಸಂದರ್ಭದಲ್ಲಿ ರಾಜ್ಯದ ವಿವಿಧ ಇಲಾಖೆಗಳು ಖರ್ಚು ಮಾಡಿದ ಹಣವೆಷ್ಟು; (ಇಲಾಖಾವಾರು ಮಾಹಿತಿ ನೀಡುವುದು);

ಆ) ಈ ಸಮಾರಂಭಕ್ಕಾಗಿ ರಾಜ್ಯದ ವಿವಿಧ ಇಲಾಖೆಗಳು ಹಣ ಖರ್ಚು ಮಾಡುವಾಗ ಪಾರದರ್ಶಕ ನಿಯಮವನ್ನು ಪಾಲಿಸಲಾಗಿದೆಯೇ; ಪಾಲಿಸದಿದ್ದಲ್ಲಿ ಇಲಾಖೆಗಳ ವಿರುದ್ಧ ಸರ್ಕಾರ ಕ್ರಮ ಕೈಗೊಂಡಿದೆಯೇ (ಇಲಾಖಾವಾರು ಪೂರ್ಣ ಮಾಹಿತಿ ನೀಡುವುದು);

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಶ್ರೀ ಕೃಷ್ಣದೇವರಾಯರವರ 500ನೇ ವರ್ಷದ ಪಟ್ಟಾಭಿಷೇಕದ ಮಹೋತ್ಸವಕ್ಕೆ ವಿವಿಧ ಇಲಾಖೆಗಳು ಖರ್ಚು ಮಾಡಿದ ಹಣದ ವಿವರ ಈ ಕೆಳಕಂಡಂತಿದೆ.

ಇಲಾಖೆಗಳು	ಖರ್ಚಾದ ಹಣದ ವಿವರ
1. ಲೋಕೋಪಯೋಗಿ ಇಲಾಖೆ	6,00,00,000.00
2. ಪ್ರಾಚ್ಯವಸ್ತು ಸಂಗ್ರಹಾಲಯ ಇಲಾಖೆ	20,00,000.00
3. ಪ್ರವಾಸೋದ್ಯಮ ಇಲಾಖೆ	6,41,00,000.00
4. ವಾರ್ತಾ ಇಲಾಖೆ	2,81,53,491.00

5. ಕನ್ನಡ ವಿಶ್ವವಿದ್ಯಾಲಯ (ಶಿಕ್ಷಣ ಇಲಾಖೆ)	5,05,000.00
6. ಜಿಲ್ಲಾಧಿಕಾರಿಗಳು, ಬಳ್ಳಾರಿ	8,40,31,500.00
7. ಪೊಲೀಸ್ ಇಲಾಖೆ, ಬಳ್ಳಾರಿ	39,96,562.00
8. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ	3,70,05,850.00
9. ಪ್ರಾಥಮಿಕ ಶಿಕ್ಷಣ ಮತ್ತು ಪ್ರೌಢ ಶಿಕ್ಷಣ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ.	6,00,000.00
10. ಕಾಲೇಜು ಶಿಕ್ಷಣ ಇಲಾಖೆ.	6,00,000.00
ಒಟ್ಟು	**28,09,92,403.00**

ಅ) ಆರ್ಥಿಕ ಇಲಾಖೆಯು ಅಧಿಸೂಚನೆ ಸಂಖ್ಯೆ:ಆಇ 22 ವೆಚ್ಚ–12/10, ದಿನಾಂಕ: 22–01–2010 ರಲ್ಲಿ ಸದರಿ ಕಾರ್ಯಕ್ರಮಕ್ಕೆ ಪಾರದರ್ಶಕ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ತುಮಕೂರು ಜಿಲ್ಲೆಯಲ್ಲಿ ಗೃಹ ಮಂಡಳಿಯಿಂದ ಭೂಸ್ವಾಧೀನ ಪ್ರಕ್ರಿಯೆ

239 (453) ಶ್ರೀ ಶ್ರೀನಿವಾಸ್ (ವಾಸು) ಎಸ್.ಆರ್.(ಗುಬ್ಬಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ದಿನಾಂಕ: 1–5–2008 ರಿಂದ ದಿನಾಂಕ: 22–2–2010 ರವರೆಗೂ ಗೃಹ ನಿರ್ಮಾಣ ಮಂಡಳಿಯಿಂದ ಸಾರ್ವಜನಿಕರಿಗಾಗಿ ನಿವೇಶನ ಹಾಗೂ ಇತರೆ ನಿವೇಶನಗಳಿಗಾಗಿ ಜಮೀನು ಸ್ವಾಧೀನ ಪಡಿಸಿಕೊಳ್ಳಲು ಪ್ರಾಥಮಿಕ ಅಧಿಸೂಚನೆ ಹೊರಡಿಸಿ ಸ್ವಾಧೀನಪಡಿಸಿಕೊಂಡ ಜಮೀನಿನ ವಿಸ್ತೀರ್ಣವೆಷ್ಟು; ಅಧಿಸೂಚನೆಗಳ ಪ್ರತಿಗಳನ್ನು ಒದಗಿಸುವುದು (ತಾಲ್ಲೂಕುವಾರು ಮಾಹಿತಿ ನೀಡುವುದು);

ಆ) ಪ್ರಾಥಮಿಕ ಅಧಿಸೂಚನೆ ಮತ್ತು ಅಂತಿಮ ಅಧಿಸೂಚನೆ ಹೊರಡಿಸುವ ಮುನ್ನ ಕೈಬಿಡಲಾದ ಜಮೀನಿನ ವಿಸ್ತೀರ್ಣವೆಷ್ಟು ಜಮೀನುಗಳನ್ನು ಕೈಬಿಡಲು ಕಾರಣಗಳೇನು, ಅಧಿಸೂಚನೆಗಳ ಪ್ರತಿಗಳನ್ನು ಒದಗಿಸುವುದು (ತಾಲ್ಲೂಕುವಾರು ಮಾಹಿತಿ ನೀಡುವುದು);